ಕರ್ನಾಟಕ ಲೋಕ ಸೇವಾ ಆಯೋಗ

ಸಂಖ್ಯೆ: KPSCKA/RCT2/2026-27/313909/16 ದಿ: 17-04-2026.

ಅಭ್ಯರ್ಥಿಗಳ ಮಾಹಿತಿಗಾಗಿ

*****

ಜಲ ಸಂಪನ್ಮೂಲ ಇಲಾಖೆಯಲ್ಲಿನ ಕಿರಿಯ ಇಂಜಿನಿಯರ್ (ಸಿವಿಲ್) –216 ಮತ್ತು ಸೇವಾ ನಿರತ ಗ್ರೂಪ್ –ಸಿ ಸಿಬ್ಬಂದಿಗಳ 54 ಹುದ್ದೆಗಳು ಹಾಗೂ ಕಿರಿಯ ಇಂಜಿನಿಯರ್ ಮೆಕ್ಯಾನಿಕಲ್ –24 ಹಾಗೂ ಸೇವಾನಿರತ ಗ್ರೂಪ್–ಸಿ ಸಿಬ್ಬಂದಿಗಳ –06 ಹುದ್ದೆಗಳಿಗೆ ದಿ:15–03–2024ರಂದು ಅಧಿಸೂಚನೆ ಸಂಖ್ಯೆ: 503 ಆರ್ ಟಿ ಬಿ – 2/2023–24/3494ರಲ್ಲಿ ಅಧಿಸೂಚಿಸಿದ್ದು, ಸದರಿ ಹುದ್ದೆಗಳಿಗೆ 1:3 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದಿ:20–02–2026 ರಿಂದ 26–02–2026 ರವರೆಗೆ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಲಾಗಿರುತ್ತದೆ. ಪ್ರಸ್ತುತ 1:1 ರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸುವ ಪ್ರಕ್ರಿಯೆ ಬಾಕಿ ಇರುತ್ತದೆ. ಈ ಕಾರ್ಯಕ್ಕೆ ಪರೀಕ್ಷಾ ನಿಯಂತ್ರಕರ ಅನುಮೋದನೆಯ ಅವಶ್ಯಕತೆ ಇದ್ದು, ಸದರಿಯವರು ದಿ:16–04–2026 ರಿಂದ **18-04-2026**ರವರೆಗೆ ಸರ್ಕಾರಿ ಅಧಿಕೃತ ಕಾರ್ಯ ನಿಮಿತ್ತ ದೆಹಲಿ ಪ್ರವಾಸದಲ್ಲಿರುವುದರಿಂದ 1:1 ರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಸಿದ್ದಪಡಿಸಲು ತಡವಾಗಿದ್ದು, ಪರೀಕ್ಷಾ ನಿಯಂತ್ರಕರು ದಿ:21–04–2026ರಂದು ಹಿಂದಿರುಗಲಿದ್ದು, ತದನಂತರ ಶೀಘ್ರವಾಗಿ ಸದರಿ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಕ್ರಮವಹಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

ಸಹಿ/-

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ